ಕ) ಈ ಸಂಸ್ಥೆ ವರದಿ ನೀಡಿದ್ದಲ್ಲಿ ವರದಿಯ ಸಾರಾಂಶಗಳನ್ನು ಹಾಗೂ ವರದಿಯ ಪ್ರತಿಯನ್ನು ಒದಗಿಸುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಹಾ ಮತ್ತು ವಕ್ಫ್‌ಕಂದಿಬಿ ಸಚಿವರು) :

ಅ) ಹೌದು.

ಬ) ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

ಕ) ಸಿ ಓ ಡಿ ಯು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಗುತ್ತಿಗೆ ನೀಡುವಲ್ಲಿ ಮತ್ತು ಬಿಲ್ಲುಗಳ ಪಾವತಿಯಲ್ಲಿ ಅಕ್ರಮವೆಸಗಿರುವ ಬಗ್ಗೆ ಪ್ರಸ್ತಾಪಿಸಿದೆ. ವರದಿಯು ಪರಿಶೀಲನೆಯಲ್ಲಿದೆ. ವರದಿಯ ಪ್ರತಿಯನ್ನು ಆದಷ್ಟು ಶೀಘ್ರವಾಗಿ ಒದಗಿಸಲಾಗುವುದು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 4ನೇ ಮಾರ್ಚ್, 1996 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ವಿಷಯ ಸಮಿತಿಗಳ ನಿಯಮಾವಳಿಗೆ ತಿದ್ದುಪಡಿ ತರಲು ಕರ್ನಾಟಕ ವಿಧಾನಸಭೆಯ ನಿಯಮಾವಳಿಗಳ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ನಾನು ನಾಮನಿರ್ದೇಶನ ಮಾಡಿರುತ್ತೇನೆ.

ಶ್ರೀಯುತರುಗಳಾದ :

1)	ರಮೇಶ್ ಕುಮಾರ್	:	ಮಾನ್ಯ ವಿಧಾನ ಸಭಾಧ್ಯಕ್ಷರು ಮತ್ತು ಸಮಿತಿಯ ಅಧ್ಯಕ್ಷರು
2)	ಎಂ.ಎಸ್. ಪಾಟೀಲ್	:	ಮಾನ್ಯ ವಿಧಾನ ಸಭೆಯ ಉಪ ಸಭಾಧ್ಯಕ್ಷರು ಮತ್ತು ಸಮಿತಿಯ ಸದಸ್ಯರು.
3)	ಸಿದ್ದರಾಮಯ್ಯ	:	ಮಾನ್ಯ ಹಣಕಾಸು ಸಚಿವರು ಮತ್ತು ಸಮಿತಿಯ ಸದಸ್ಯರು
4)	ಎಂ.ಸಿ. ನಾಣಯ್ಯ	:	ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು ಮತ್ತು ಸಮಿತಿಯ ಸದಸ್ಯರು.
5)	ಕೆ.ಜಯಪ್ರಕಾಶ್ ರೆಡ್ಡಿ	:	ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಮತ್ತು ಸಮಿತಿಯ ಸದಸ್ಯರು
6)	ಬಿ.ಎಸ್. ಕೌಜಲಗಿ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
7)	ಕೆ.ಎಸ್. ಈಶ್ವರಪ್ಪ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
8)	ಕೆ.ವಿ. ಶರಣಪ್ಪ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
9)	ಸದಾನಂದ ಗೌಡ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು

10) ಶ್ರೀರಾಮರೆಡ್ಡಿ : ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು

11) ಮಂಜುನಾಥ್ ಸಿ. ಕುನ್ನೂರು: ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು

ನಿಯಮಾವಳಿ ರೀತ್ಯಾ ಮಾನ್ಯ ಸಭಾಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

11.10 ಪಿ.ಎಂ.

: ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಚರ್ಚೆ ಮುಕ್ತಾಯವಾಗಿದೆ. ನಾಯಕರು ತಮ್ಮ ಉತ್ತರವನ್ನು ಪ್ರಾರಂಭಿಸಬಹುದು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಚರ್ಚೆಗೆ ಸರ್ಕಾರದಿಂದ ಉತ್ತರ

+ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 19-2-1996 ಸೋಮವಾರದಂದು ಜಂಟೀ ಸದನವನ್ನು ಉದ್ದೇಶಿಸಿ ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣದ ಮೇಲೆ ಅನೇಕ ಜನ ವಿರೋಧಪಕ್ಷದ ನಾಯಕರು ಸೇರಿದಂತೆ ಗೌರವಾನ್ವಿತ ಸದಸ್ಯರುಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಹ ಕಾಲದಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರ ನಡೆದು ಬಂದಿರುವಂತಹ ದಾರಿಯ ಬಗ್ಗೆ ಸರ್ಕಾರದ ತಪ್ಪು ಒಪ್ಪುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ, ಅನೇಕ ಅಮೂಲ್ಯವಾದಂತಹ ಸಲಹೆಗಳನ್ನು ಸಹ ಕೊಟ್ಟಿದ್ದಾರೆ, ಅವರೆಲ್ಲರಿಗೂ ಪ್ರಥಮವಾಗಿ ವಂದಿಸುತ್ತೇನೆ. ರಾಜ್ಯಪಾಲರು ಮಾಡಿದಂತಹ ಭಾಷಣದಲ್ಲಿ ಸಾಮಾನ್ಯವಾಗಿ ಮುಂದಿನ ವರ್ಷದ ಸರ್ಕಾರದ ನೀತಿಯ ಬಗ್ಗೆ ಮುಂದಿನ ವರ್ಷದಲ್ಲಿ ನಾವೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಪ್ರಾಮುಕ್ಯವಾಗಿ ಅವರ ಭಾಷಣ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ನನ್ನ ಅಲ್ಪ ಅನುಭವದಲ್ಲಿ ನೀತಿಯ ಬಗ್ಗೆ ನಾವು ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತೇವೆ. ಬಾಕಿ ಎಲ್ಲಾ ವಿಷಯಗಳನ್ನು ಸರ್ವೆಸಾಮಾನ್ಯವಾಗಿ ಬಜೆಟ್ ಭಾಷಣದಲ್ಲಿ ಸನ್ಮಾನ್ಯ ಅರ್ಥ ಸಚಿವರು ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಮತ್ತು ರಾಜ್ಯದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ನಾವು ಏನು ಮಾಡುತ್ತೇನೆಂಬುದನ್ನು ಅರ್ಥ ಸಚಿವರು ಬಜೆಟ್ ಭಾಷಣದಲ್ಲಿ ಮಂಡನೆ ಮಾಡುತ್ತಾರೆ. ನಾನು ಪ್ರಥಮವಾಗಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಈ ಸರ್ಕಾರದ ಗುರಿ, ಈ ಸರ್ಕಾರದ ನೀತಿ, ಇವರಡನ್ನು ನಾನು ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಈ ಸರ್ಕಾರದ ಗುರಿ ಈ ರಾಜ್ಯ ಬೇರೆ ಎಲ್ಲಾ ರಾಜ್ಯಗಳಿಗಿಂತ ನಮ್ಮ ಅಭಿವೃದ್ಧಿಯ ವೇಗ ಹೆಚ್ಚಾಗಬೇಕು, ನಮ್ಮ ಕೈಗಾರಿಕಾ ಬೆಳವಣಿಗೆ ಹೆಚ್ಚಾಗಬೇಕು. ನಮ್ಮ ವ್ಯವಸಾಯ ರಂಗದಲ್ಲಿ ನಮ್ಮ ಸಾಧನೆ ಹೆಚ್ಚಾಗಬೇಕು. ರಾಜ್ಯದಲ್ಲಿರುವಂತಹ ನಿರುದ್ಯೋಗ ಸಮಸ್ಯೆಗೆ ತಕ್ಕಂತೆ ಸ್ಪಂದಿಸುವ ಹಾಗೆ ನಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಇದು ನಮ್ಮ ಮುಖ್ಯ ಗುರಿಯಾಗಿದೆ. ಸಾಮಾನ್ಯವಾಗಿರತಕ್ಕಂಥ ನಾಗರಿಕ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ಒದಗಿಸುವಂಥಾದ್ದಕ್ಕೆ ಅವಶ್ಯಕವಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂಥಾದ್ದು. ನಮ್ಮ ಸರ್ಕಾರದ